ಶ್ರೀ ವೀರೇಂದ್ರ ಪಾಟೀಲ್.—ಕನ್ನಡದಲ್ಲಿ ತಪ್ಪಾಗಿದೆ. ಇಂಗ್ಲೀಷಿನಲ್ಲಿ ಸರಿಯಾಗಿ ಕೊಟ್ಟಿದೆ. ಅದನ್ನು ದಯವಿಟ್ಟು ನೋಡಿ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈಗಲೂ ಆ ಪ್ರದೇಶ ಕಂಪೆನಿಯವರಿಗೆ ಜೇರಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—1911 ರಲ್ಲಿ ಅವರು ಆ ಗಣಿಯನ್ನು work ಮಾಡುವುದನ್ನು ಬಿಟ್ಟರು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಆ ಕಂಪೆನಿಯ ವರದಿಯೇನಾದರೂ ನಿಮ್ಮಲ್ಲಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನಾನಾಗಲೇ ಹೇಳಿದ್ದೇನೆ. ನಮ್ಮ ರಾಜ್ಯ ಸರ್ಕಾರದಲ್ಲಿ ಅಂಥ ಯಾವ ವರದಿಯೂ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಪ್ಯಾಮಿ, (*c*) ಪ್ರಶ್ನೆಗೆ ಕೊಟ್ಟಿರುವ ಉತ್ತರವೇ ಸಮರ್ಪಕವಾಗಿಲ್ಲ. ಗಿಡಮೂಲಿಕೆಗಳು ದೊರೆಯುತ್ತಿವೆಯೇ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಹೇಳಿಲ್ಲ. ಅಂದರೆ Rejuvenationನ್ನಿಗೆ ಅನುಕೂಲವಾದಂಥ ಗಿಡಮೂಲಿಕೆಗಳು ಯಾವುದಾದರೂ ಅಲ್ಲವೆಯೇ?

ಅಧ್ಯಕ್ಷರು.—ಕನ್ನಡದಲ್ಲಿ ಉತ್ತರ ಸ್ವಲ್ಪ ವ್ಯತ್ಯಾಸವಾಗಿ ಬಿದ್ದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವುದಕ್ಕೆ ಸಂಬಂಧಪಟ್ಟ ಹಾಗಿರುವ ಗಿಡಮೂಲಿಕೆಗಳು ಅಲ್ಲವೆ?

ಅಧ್ಯಕ್ಷರು.—ಇಂಗ್ಲೀಷಿನ ಪ್ರತಿಯಲ್ಲಿ ಗಿಡಮೂಲಿಕೆಗಳ ವಿಚಾರ ಇಲ್ಲವೇ ಇಲ್ಲ!

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗಿಡಮೂಲಿಕೆಗಳು ಅಲ್ಲಿ ಸಿಕ್ಕುವುದಿಲ್ಲವೆಂದು ತಿಳಿದುಕೊಳ್ಳೋಣವೇ?

ಅಧ್ಯಕ್ಷರು.—ತಾವು ತಿಳಿದುಕೊಳ್ಳುವ ವಿಚಾರ ಬೇರೆ. ಇಲ್ಲಿ ಅದನ್ನು ಕೊಟ್ಟಿಲ್ಲ.

ಶ್ರೀ ಎಫ್. ಎಚ್. ಮೊಹಸೀನ್.—ಯಾವಾಗ ಈ ರಾಜ್ಯ ಸರ್ಕಾರ ಆ ಭಾಗಗಳ ಸರ್ವೆ ಮಾಡಬೇಕೆಂದಿದೆ?

ಶ್ರೀ ವೀರೇಂದ್ರ ಪಾಟೀಲ್.—ಇಂಟೆಗ್ರೇಟೆಡ್ ಪ್ರದೇಶದಲ್ಲಿ ಡಿವಿಜನಲ್ ಆಫೀಸುಗಳನ್ನು ತೆರೆಯಬೇಕೆಂದು ಮನಸ್ಸು ಮಾಡಿದ್ದೇವೆ. ಅದಾದ ಮೇಲೆ intensive survey ಮಾಡಬೇಕೆಂದಿದೆ.

ಶ್ರೀ ಎಫ್. ಎಚ್. ಮೊಹಸೀನ್.—ಎಷ್ಟು ಕಾಲದಲ್ಲಿ ಆಗಬಹುದು?

ಶ್ರೀ ವೀರೇಂದ್ರ ಪಾಟೀಲ್.—ಆಫೀಸ್‌ಗಳನ್ನು ತೆರದ ಕೂಡಲೆ ಮಾಡುತ್ತೇವೆ.

ಶ್ರೀ ಎಫ್. ಎಚ್. ಮೊಹಸೀನ್.—ಈ ಬಗ್ಗೆ ನಿರ್ದಿಷ್ಟ ಕಾರ್ಯಕ್ರಮ ಇಟ್ಟು ಕೊಂಡಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಬಳ್ಳಾರಿಯಲ್ಲಿ ಒಂದು ಡಿವಿಜನಲ್ ಆಫೀಸ್ ಇದೆ. ಈಗಾಗಲೇ ಅಲ್ಲಿ ಕಾರ್ಯಕ್ರಮ ಕೈಕೊಂಡಿದ್ದೇವೆ. ಇಲ್ಲಿಯೂ ಆಫೀಸ್‌ಗಳನ್ನು ತೆರೆದ ಮೇಲೆ ಅವರು ಮಾಡುವ ಕೆಲಸ ಇದೇ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—(*d*) ಪ್ರಶ್ನೆಯಲ್ಲಿ "ಕೇಂದ್ರ ಸರ್ಕಾರದವರಿಂದಲಾಗಲೀ ಅಥವಾ ರಾಜ್ಯ ಸರ್ಕಾರದವರಿಂದಲಾಗಲೀ ಯಾವುದಾದರೂ ಸರ್ವೆ ಪರಿಶೀಲನೆ ನಡೆಯಿಸಲ್ಪಟ್ಟಿದ್ದಿತೆ" ಎಂದು ಕೇಳಿರುವುದಕ್ಕೆ ಉತ್ತರವಾಗಿ "ಮೈಸೂರು ರಾಜ್ಯದ ಸರ್ವೆಯಾಗದಿರುವ ಪ್ರದೇಶಗಳ ಸರ್ವೆ ಮಾಡಿಸಬೇಕೆಂದು ರಾಜ್ಯಸರ್ಕಾರದ ವಿಚಾರವಾಗಿದೆ" ಎಂದು ಹೇಳಿದ್ದೀರಿ. ಪ್ರಶ್ನೆ ಕೇಳಿರುವುದೊಂದು, ಉತ್ತರ ಹೇಳಿರುವುದೊಂದು.

ಅಧ್ಯಕ್ಷರು.—ಇಂಗ್ಲೀಷ್ ಪ್ರತಿಯನ್ನು ದಯವಿಟ್ಟು ನೋಡಿಕೊಳ್ಳಿ. ಕನ್ನಡದಲ್ಲಿ ಸರಿಯಾಗಿಲ್ಲವೆಂದು ಹೇಳಿದ್ದೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಕನ್ನಡದಲ್ಲೇಕೆ ಹೀಗೆ ತಪ್ಪುಗಳು ಬರುತ್ತಿವೆ? We are closely following the Kannada copy.

Mr. SPEAKER.—We shall see about it.

Sri K. S. SURYANARAYANA RAO.—Apart from that, I want to know if the Government is aware that a geological survey has been made by the Government of India in areas not covered by the Ex-Mysore State.

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ. ಜಿಯಲಾಜಿಕಲ್ ಸರ್ವೆಯನ್ನು ಇಂಡಿಯಾ ಸರ್ಕಾರದವರು ಮಾಡಿದ್ದಾರೆ ಎಂದು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಹಾಗೆ ಮಾಡಿದ್ದರೆ ಅದರ ಕಾಪಿ ಮೈಸೂರು ಸರ್ಕಾರದಲ್ಲಿದೆಯೇ?

ಅಧ್ಯಕ್ಷರು.—ರಿಪೋರ್ಟ್ ತಮ್ಮಲ್ಲಿಲ್ಲವೆಂದು ಹೇಳಿದ್ದಾರೆ. ಅದನ್ನು ತರಿಸಿಕೊಳ್ಳುವವರಾಗಿದ್ದಾರೆಂದೂ ತಿಳಿಸಿದ್ದಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ತರಿಸಿಕೊಳ್ಳುವುದಕ್ಕೆ ಯಾವಾಗ ಪ್ರಯತ್ನಪಟ್ಟಿರಿ?

ಶ್ರೀ ವೀರೇಂದ್ರ ಪಾಟೀಲ್.—ಜಿಯಲಾಜಿಕಲ್ ಸರ್ವೆ ನಡೆಸುವುದು ನಮ್ಮ ಕೆಲಸವಲ್ಲ. ಕೇಂದ್ರ ಸರ್ಕಾರದ ಶಾಖೆ ಒಂದು ದೇಶದ ಎಲ್ಲಾಕಡೆಯಲ್ಲೂ ಸರ್ವೆ ನಡೆಸಿ ರಿಪೋರ್ಟ್ ಇಟ್ಟುಕೊಳ್ಳುತ್ತಾರೆ. ನಮಗೆ ಅದನ್ನು ಕಳುಹಿಸಿಕೊಡಬೇಕೆಂಬ ಒತ್ತಾಯವೇನಿಲ್ಲ. ಮಾನ್ಯ ಸದಸ್ಯರು ಹೇಳಿದುದರ ಮೇಲೆ ಅದನ್ನು ತರಿಸಿಕೊಳ್ಳುತ್ತೇವೆಂದು ಹೇಳಿದೆ.

Mr. SPEAKER.—Question time is over.

QUESTIONS FOR ANSWERS ON THE DAY.

(but not taken up)

Application for Sanction of Site for Construction of School Building at Alur.

Q.—1614. Sri B. T. MURNAL (Bagalkot).—

Will the Government be pleased to state:—

(*a*) whether it is a fact that the villagers of Alur in Bagalkot taluk have applied on 14th October 1951 for the grant of a site in R.S. No. 6 for constructing a school building;

(*b*) if so, the reasons for the delay in sanctioning the site?

A.— Sri M. P. PATIL (Minister for Revenue).—

(*a*) No.

(*b*) Does not arise in view of the answer to (*a*).